ಸವರಿಬಿಡುತ್ತಿದ್ದ. ಆದರೆ ಬೇವಿನ ಸಸಿ ಕಂಡಾಗ ಅವನ ಕೈಯೊಳಗಿನ ಮೊಂಡಗತ್ತಿ ಸ್ವಲ್ಪ ಎಚ್ಚರ ವಹಿಸುತ್ತಿತ್ತು. ಯಾಕಣ್ಣ ಎಂದು ಕೇಳಿದರೆ 'ನಿಂಗೆ ಗೊತ್ತಿಲ್ಲ ಕಣ್ಲಾ,

**'ಬೇವು ಇದ್ರೆ ಹೊಲ ಚೆಂದ**
**ಮೇವು ಇದ್ರೆ ಹಿಟ್ಲು ಚೆಂದ,**
**ಉಣ್ಣುವಾಗ ಬೇವಿನ**
**ಮರದಡಿಯ ನೆಳ್ಳು ಬಾರಿ ತಂಪು'**

–ಎಂದು ತನ್ನ ಬಾಳಲ್ಲಿ ಕಂಡುಕೊಂಡ ಫಲಿತಗಳನ್ನು ಹೇಳುತ್ತಿದ್ದ. ಅಂತೆಯೆ ಅವ್ವ ಬುತ್ತಿ ತಂದಾಗಲೆಲ್ಲ ಅಪ್ಪ ಬೇವಿನ ನೆರಳಿನಲ್ಲಿಯೇ ಭುಜಿಸುತ್ತಿದ್ದ. ವಿಶ್ರಾಂತಿ ಬೇಕೆಂದಾಗ ಉಟ್ಟ ಪಂಚೆಯನ್ನು ಬಿಚ್ಚಿ ಸಿಂಬೆ ಸುತ್ತಿ ದಿಂಬಾಗಿಸಿ ಬೇವಿನ ನೆರಳಲ್ಲಿ ಆರಾಮಾಗುತ್ತಿದ್ದ.

ನೀರು ನಿಡಿ ಇಲ್ಲದೆ ಸಸ್ಯಜಗತ್ತು ನಿಶ್ಚಲವಾಗಿರುವಾಗ ಬೇವು ಮಾತ್ರ ಹಸಿರು ಎಲೆ, ಬಿಳಿ ಹೂಗಳಿಂದ ಮೈದಾಳಿ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತದೆ. ಬಾಳಿನಲ್ಲಿ ಕಹಿ ಬಂದಾಗ ಕೊರಗುವವರು ಬೇವಿನ ಪಲ್ಲವಿಸುವಿಕೆಯ ಕಾಲವನ್ನು ಪ್ರೇರಣೆಯಾಗಿ ತೆಗೆದುಕೊಳ್ಳಬೇಕು. ಸಮಸ್ತ ನಿಸರ್ಗವೇ ಪ್ರತಿಕೂಲ ಸನ್ನಿವೇಶವೆಂದು ಬಗೆದು ಮಗುಮ್ಮಾಗಿರುವಾಗ ಬೇವು ಕುಡಿಯೊಡೆಯುತ್ತದೆ, ಹೂವಾಗುತ್ತದೆ, ನೆರಳಾಗುತ್ತದೆ. ಹಾಗಾಗಿ ಕಲಾವಿದರು ಬಾಳಿನ ಕಹಿಗೆ ಬೇವನ್ನು ನಿದರ್ಶನ ಮಾಡುವುದು ಯಾಕೋ ಸರಿ ಕಾಣದು.

ಬಯಲುಸೀಮೆಯ ಎಲ್ಲ ದೇವಾನುದೇವತೆಗಳು ಬೇವಿನಾಶ್ರಯ ಪಡೆದೇ ಘಮ್ಮೆನ್ನುತ್ತವೆ. ಬೇಸಿಗೆ ಕಾಲ ಪ್ರಾರಂಭವಾಗುತ್ತಲೇ ಕರ್ನಾಟಕದ ಬೇರೆ ಬೇರೆ ಊರುಗಳಲ್ಲಿ ಸಾಲುಗಟ್ಟಿ ಬರುವ ಮಾರಮ್ಮನ ಹಬ್ಬಕ್ಕೆ ಜನ ಮೈಮೇಲೆ ಬೊಕ್ಕೆ, ಸಿಡುಬು, ಕಜ್ಜಿಗಳು ಮೂಡಬಾರದೆಂದು ಬೇವಿನುಡುಗೆ ಉಟ್ಟು ಮೂರು ಸುತ್ತು ಹಾಕುತ್ತಿರುತ್ತಾರೆ. ಆದ್ದರಿಂದ ಮಾರಮ್ಮನಿಗೂ ಬೇವಿಗೂ ಅವಿನಾಭಾವ. ಆದರೆ ಗಂಡು ದೇವರಿಗೆ ಅಪ್ಪಿತಪ್ಪಿಯೂ ಬೇವನ್ನು ಮುಡಿಸುವುದಿಲ್ಲ. ಕಹಿಯನ್ನು ಮತ್ತು ಕಹಿ ಸತ್ಯವನ್ನು ತಾಳಿಕೊಳ್ಳುವ ಗಂಡುಸಂತಾನ ನಮ್ಮಲ್ಲಿ ವಿರಳವಲ್ಲವೆ?

ಜನಪದರು 'ಬ್ಯಾಸಿಗೆ ಕಾಲಕ್ಕೆ ಬೇವಿನ ಮರ ತಂಪು' ಎಂದು ಸುಮ್ಮನೆ ಹಾಡಲಿಲ್ಲ. ಈಗ ನೀವು ಬಯಲುಸೀಮೆಯ ಹಳ್ಳಿಗೆ ಹೋಗಿ ನೋಡಿ; ಹೆಂಗಸರು ಕೈಕಾಸಾಗಲೆಂದು ಹೊಳೆಸಾಲಿನಲ್ಲಿ ಕೈಚೀಲವೊಂದನ್ನು ಹಿಡಿದು ಬೇವಿನ ಬೀಜಗಳನ್ನು ಎರಕುತ್ತಿರುತ್ತಾರೆ. ಸಣ್ಣ ಚಾಪೆಯೊಂದನ್ನು ಹಾಸಿಕೊಂಡು ಇಸ್ಪೀಟು ಹಾಡುವ ತರುಣರು ಬೇವಿನ ಮರದ ಕೆಳಗೆ ಸಿಗುತ್ತಾರೆ. ವಯಸ್ಸಾದ ವೃದ್ಧಮಾನ್ಯರು ಚಡ್ಡಿ, ಬನ್ನಿಯನ್ನುಗಳಲ್ಲಿ ಬೇವಿನಮರದ ಕೆಳಗೆ ಪವಡಿಸಿರುತ್ತಾರೆ. ಆಡುವ ಮಕ್ಕಳು ಮರದ ಕೊರಡಿಗೆಯನ್ನು ಹಗ್ಗಕ್ಕೆ ಕಟ್ಟಿ ಬೇವಿನ ಮರದ ಕೆಳಗೆ ಜೋಲಿ ಹೊಡೆಯುತ್ತಿರುತ್ತಾರೆ. ಕೆಲವೇ ದಿನಗಳಲ್ಲಿ ಹಾರು ಎಳೆಯಬೇಕಾಗಿರುವ ಎತ್ತುಗಳು ಬೇವಿನ ಮರದಡಿ ಕಾಲು ಚಾಚಿ ಮಲಗಿ ಮೆಲುಕು ಹಾಕುತ್ತಿರುತ್ತವೆ.

ನಮ್ಮ ನಾಡಿನಲ್ಲಿ ಯಾರೊಬ್ಬರೂ ಬೇವಿನ ಸಸಿ



ನೆಟ್ಟು ಬೆಳೆಸಿಲ್ಲ. ಆದಾಗ್ಯೂ ಅವುಗಳ ಸಂತತಿ ಹೆಚ್ಚಿದೆ. ಬೀದಿ ಸಸಿಗಳು ಬೆಳೆದೊ ಎಂದು ಬೇವಿಗೇಳಬೇಕು. ದಾಸರು ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಬಿತ್ತಿ ಎಂದು ಹುಟ್ಟುದುರುಳರ ಬಗ್ಗೆ ವಿವರಿಸಲು ಬೇವನ್ನು ಬಳಸಿಕೊಂಡಿರುವುದನ್ನು ನಾನು ಖಂಡಿಸುತ್ತೇನೆ. ವಾಸ್ತವವಾಗಿ ಬೆಲ್ಲ ಸಿಹಿ ಎಂದು ಗೊತ್ತಾಗುವುದು ಬೇವಿನಿಂದ. ಸುಖದ ಅನುಭವ ಪ್ರಾಪ್ತಿಯಾಗುವುದು ಈ ಹಿಂದೆ ಬಂದೊದಗಿದ್ದ ಅಹಿತದಿಂದ. ಸಿಹಿಯ ಅನನ್ಯತೆ ದಕ್ಕುವುದು ಕಹಿಯಿಂದ.

●